

## ಚೆಂದದ ಬೆಟ್ಟದಾವರೆ

ಈ ಚಿತ್ರದಲ್ಲಿ ಕಾಣುತ್ತಿರುವ ಬೆಟ್ಟದ ತಾವರೆ ಹೂವು ದಾಸವಾಳ ಕುಟುಂಬಕ್ಕೆ ಸೇರಿದ್ದು. ಇದನ್ನು ಚೈನೀಸ್ ರೋಸ್, ಕಾಟನ್ ರೋಸ್ ಎಂದು ಕರೆಯಲಾಗುತ್ತದೆ. ಸೂರ್ಯನ ಬಿಸಿಲಿಗೆ ತಕ್ಕಂತೆ ಹೂವಿನ ಬಣ್ಣ ಬದಲಾಗುವುದು ಇದರ ವಿಶೇಷತೆ. ಮುಂಜಾನೆ ಸಮಯದಲ್ಲಿ ಶುಭ್ರ ಬಿಳಿ ಬಣ್ಣದಿಂದ ಕೂಡಿದ್ದರೆ, ಮಧ್ಯಾಹ್ನದ ಹೊತ್ತಿಗೆ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿ, ಸಾಯಂಕಾಲದ ಹೊತ್ತಿಗೆ ಕಡು ಗುಲಾಬಿ ಬಣ್ಣಕ್ಕೆ ಬದಲಾಗುತ್ತದೆ. ಈ ಹೂವಿನ ಗಿಡದ ಎಲೆ ಹಾಗೂ ಬೇರಿನಲ್ಲಿ ಅನೇಕ ಔಷಧೀಯ ಗುಣಗಳಿದ್ದು, ಅರಳಿದ ಹೂವುಗಳನ್ನು ನೋಡುವುದೇ ಸೊಗಸು.

–ಸಂಜ್ಞಾ ಪಿ ಭಟ್ಟ, ಶಿರಸಿ





## ಹಾಡುಹಕ್ಕಿಯ ಪಾಡು

‘ದಾಳಿಂಬೆ ಬೆಳೆಗೆ ಹಾಕುವ ಬಲೆಯಲ್ಲಿ ಪಕ್ಷಿಯೊಂದು ಬಿದ್ದು ಒದ್ದಾಡುತ್ತಿದೆ’ ಎಂದು ಅಪ್ಪಾಜಿ ತಿಳಿಸಿದಾಗ ಯಾವುದು ಆ ಪಕ್ಷಿ ಎಂದು ಕುತೂಹಲದಿಂದ ನೋಡಹೋದೆ. ಗುಬ್ಬಚ್ಚಿಯನ್ನೇ ಹೋಲುವ ಪುಟ್ಟ ಚೇಕಡಿ (cinereous tit) ಪಕ್ಷಿಯೊಂದು ಬಲೆಯಲ್ಲಿ ತಲೆಕೆಳಗಾಗಿ ನೇತಾಡುತ್ತಿತ್ತು. ಬಲೆಯಿಂದ ಬಿಡಿಸಹೋದರೆ ಉದ್ವೇಗದಿಂದ ರೆಕ್ಕೆ ಬಡಿದು ಕೊಕ್ಕಿನಿಂದ ಮೃದುವಾಗಿ ಕೈಬೆರಳಿಗೆ ಕುಕ್ಕಿತು. ಇದಿನ್ನೂ ಈಗಷ್ಟೇ ರೆಕ್ಕೆಬೀಸುತ್ತಿರುವ ಮರಿಹಕ್ಕಿಯಾಗಿದ್ದರಿಂದ ಹೀಗೆ ಬಲೆಗೆ ಬಿದ್ದಿದೆ. ಅನುಭವಸ್ಥ ಹಿರಿಯ ಚೇಕಡಿ ಹಕ್ಕಿಗಳು ಈ ರೀತಿಯ ಕ್ಲಿಷ್ಟಕರ ಬಲೆಗಳ ನಡುವೆಯೂ ನುಗ್ಗಿ ಅತ್ಯಂತ ಚಾಣಾಕ್ಷತನದಿಂದ ಪಾರಾಗಿ ಆಹಾರ ಸಂಪಾದಿಸಿಕೊಳ್ಳುತ್ತವೆ.

ಅಂದಹಾಗೆ ಇದು, ಸದಾ ಜೋಡಿಯಾಗಿ ‘ಚ್ವೀಚ್ ಚ್ವೀಚ್’ ಎಂದು ಇಂಪಾಗಿ ಕೂಗುತ್ತಾ ಪಾದರಸದಂತೆ ಹಾರಾಡುವ ಹಕ್ಕಿ. ಫೆಬ್ರುವರಿನವೆಂಬರ್‌ವರೆಗೆ ಸಂತಾನೋತ್ಪತ್ತಿಯಲ್ಲಿ ನಿರತವಾಗುತ್ತವೆ. ಮರದ ಪೊಟರೆಗಳನ್ನು ಗೂಡು ಮಾಡಿಕೊಳ್ಳುವ ಈ ಹಕ್ಕಿಗಳು ಸಮಾನಾಂತರವಾದ, ಕೊಳವೆಗಳಂತಹ ರಚನೆಗಳಲ್ಲಿ ಗೂಡು ಕಟ್ಟುತ್ತವೆ. ಕ್ರಿಮಿ ಕೀಟಗಳು ಇವುಗಳ ಮುಖ್ಯ ಆಹಾರ. ರೈತರ ಬೆಳೆಗಳಿಗೆ ಮಾರಕವಾದ ಅನೇಕ ಲಾರ್ವಾಗಳನ್ನು ಹಿಡಿದು ತಿನ್ನುವುದರಿಂದ ರೈತೋಪಕಾರಿ ಎನ್ನಬಹುದು. ಬಲೆಯಿಂದ ಬಿಡಿಸಿದ ತಕ್ಷಣ ಈ ಪುಟ್ಟ ಹಕ್ಕಿ ಸ್ವಾತಂತ್ರ್ಯ ಸಿಕ್ಕ ಸಂಭ್ರಮದಲ್ಲಿ ಜೋರಾಗಿ ಚ್ವೀಚ್ ಚ್ವೀಚ್ ಎಂದು ಕೂಗುತ್ತಾ ಬಾನಲ್ಲಿ ಲೀನವಾದ ದೃಶ್ಯ ಮನಸೂರೆಗೊಳಿಸಿತು.



–ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ